ಶ್ರೀನಿವಾಸ ಜಿ. ಪದಕಿ, ಮುಂಬಯಿ

ಎಂದೆಂದೂ ನಿನ್ನನು ಅಗಲಿ ಬದುಕಿರಲಾರೆ ಎಂದವಳು ವಾರದಿಂದ ಅಗಲಿದ್ದಾಳಲ್ಲಾ....?



ಕೆಮ್ಮಿದಿರಂತಲ್ಲ! ಸೋಷಿಯಲ್ ಲಾಂಗ್ ಡಿಸ್ಟೆನ್ಸಿಂಗ್ ಆಚರಿಸುತ್ತಿದ್ದಾಳೆ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ದಾನ–ಧರ್ಮ ಮಾಡಿದರೆ ಪಾಪ ಹೋಗುವುದಂತೆ. ಪಾಪ ಮಾಡ್ತಾ ಮಾಡ್ತಾ ಧಾನ–ಧರ್ಮ ಮಾಡಿದರೆ

ಕೊರೊನಾದಂತೆಯೇ ದಾನ ಪಡೆದವರಿಗೂ ಪಾಪದ ಸೋಂಕು ತಗಲುತ್ತದಂತೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಕೌಟುಂಬಿಕ ಸೌಖ್ಯವನ್ನೂ, ಪಾನ ನಿರೋಧವನ್ನೂ ಸಾರಿದ ಕೊರೊನಾಕ್ಕೆ ಧನ್ಯವಾದ ಸಲ್ಲಿಸಬಹುದೆ ಸಾರ್?

ಸಲ್ಲಿಸಬಹುದು. ಮಾನವಧರ್ಮ ಜಾಗೃತವಾಗಲು ದಾನವ ವರ್ಧನೆ ಅನಿವಾರ್ಯ.

ಪಿ.ಜೆ. ರಾಘವೇಂದ್ರ, ಮೈಸೂರು

ಸೆಲ್ಫಿ ತೆಗೆದುಕೊಳ್ಳುವವರನ್ನು ಸೆಲ್ಫಿಷ್ ಎನ್ನಬಹುದೆ?



ಸೆಲ್ಫೋನಿನ ಜಾಲದಲ್ಲೇ ಸಿಲುಕಿರುವ ಫಿಷ್ ಆದ್ದರಿಂದ ಸೆಲ್‌ಫಿಷ್ಷೇ ಸರಿ.

ಟಿ. ಅನಸೂಯಾ, ಕೇದಿಗೆಮನೆ

ಆನ್‌ಲೈನ್ ಕ್ಲಾಸುಗಳೇ ಶಾಶ್ವತವಾದರೆ?

ಸೋಡಾಬುಡ್ಡಿಗಳ ಸಂಖ್ಯೆ ಕೊರೊನಾ ಸೋಂಕಿತರಿಗಿಂತ ಹೆಚ್ಚಾಗುತ್ತದೆ.

ಹೆಚ್.ವಿ. ಶ್ರೀಧರ್, ಬೆಂಗಳೂರು

ನನ್ನ ವಾರಭವಿಷ್ಯದಲ್ಲಿ ಈ ಲಾಕ್‌ಡೌನ್ ಸಮಯದಲ್ಲೂ ವಿದೇಶ ಪ್ರಯಾಣ ಎಂದಿದೆಯಲ್ಲಾ?

ಸೂಪರ್! ಕೊರೊನಾದಿಂದ ಗ್ರಹಗಳೇ ನಿಂತರೂ ಬೊಗಳೆ ನಿಲ್ಲದು.

ಎಂ.ಜಿ. ವಾಣಿ, ಬೆಂಗಳೂರು

ಚೀನೀಯರು ಎಲ್ಲಾ ಜೀವಿಗಳನ್ನೂ ತಿನ್ನುತ್ತಿದ್ದರು. ಈಗ ಕಾಣದ ಜೀವಿಯೊಂದು ಅವರನ್ನು ತಿನ್ನುತ್ತಿದೆಯಲ್ಲಾ?

ನಾಲೆಗೆ ಹಾಕಬೇಕಾದ್ದನ್ನು ನಾಲಿಗೆಗೆ ಹಾಕಿದರೆ ನಾಳೆಗೆ ಧಕ್ಕೆ ಖಚಿತವೇ.

ಎಚ್.ಕೆ. ವಿಜಯಕುಮಾರ್, ರಾಯಚೂರು

ಸೈನಿಕನಿಗೆ ಜೀವಭಯವಿಲ್ಲ. ಭೋಗಜೀವಿಯಾದ ಶ್ರೀಸಾಮಾನ್ಯನಿಗೆ ವೈರಾಣುವಿನ ಭಯವೇಕೆ?

ಅವನು ದೇಹ ದೇಶಕ್ಕಾಗಿ ಎಂದು ನಂಬಿದವನು; ಇವನು ದೇಶ ದೇಹಕ್ಕಾಗಿ ನಂಬಿದವನು ಆದ್ದರಿಂದ.

ಎಚ್.ಎಂ. ಅನಂತಪದ್ಮನಾಭ, ಮೈಸೂರು

ಲಾಕ್‌ಡೌನ್‌ಗೂ, ಲಾಕಪ್‌ಗೂ ವ್ಯತ್ಯಾಸವೇನು ರಾಂಜಿ?

ಲಾಕಪ್‌ನಲ್ಲಿ ಪೊಲೀಸರು ರುಬ್ಬುತ್ತಾರೆ, ಲೌಕ್‌ಡೌನಲ್ಲಿ ನಾವೇ ರುಬ್ಬುತ್ತೇವೆ.

ಎಚ್.ಎನ್. ರಾಘವೇಂದ್ರ, ಬೆಂಗಳೂರು

ಇತ್ತೀಚೆಗೆ ಜನರು ಮಾಡಬೇಡಿರೆಂದಿದ್ದನ್ನೇ ಮಾಡಿ ವಿಕೃತಿ ಮೆರೆಯುತ್ತಿರುವುದೇಕೆ?

ಕಿವಿಯಿಂದ ಮೆದುಳಿಗೆ ಇರಬೇಕಾದ ಅರಿವಿನ ನರ ಸತ್ತುಹೋಗಿದೆಯಂತೆ.

ಡಾ. ವಿ. ಪುಗಳೇಂದಿ, ಬಳ್ಳಾರಿ

ಬೆಂಗಳೂರಿಗೆ ಹೋಗಿಬರೋಣ ಅಂದ್ರೆ, ಬೇಡ ಅಲ್ಲಿದೆ ಕೊರೊನಾ ಎನ್ನುತ್ತಿದ್ದಾನಲ್ಲ ಗೆಳೆಯ?

ಅಭಿನಂದನೆಗಳು. ಈ ದಿನಗಳಲ್ಲಿ ವಿವೇಕಿ ಗೆಳೆಯ ಸಿಗುವುದು ದುರ್ಲಭ.

ವಿ. ಹಮೀದ್, ವಿಟ್ಲ

ಇಲ್ಲೊಬ್ಬ ವಿದುರ ತಾತ ವರಿಸಲು ಹೆಣ್ಣು ಹುಡುಕುತ್ತಿದ್ದಾನಲ್ಲಾ?

ವಧುದಕ್ಷಿಣೆ, ವಧೂಪಚಾರ ಕೊಡುವುದಾದರೆ ಇಲ್ಲೊಬ್ಬ ವೃದ್ಧಾಶ್ರಮಿ ಸಿದ್ಧಳಂತೆ.

ರೈಲ್ವೇ ಕೆ. ತಾಯಪ್ಪ, ಬಳ್ಳಾರಿ

ಕಾಷಾಯ ವಸ್ತ್ರ ಧರಿಸಿದ ಸ್ವಾಮೀಜಿಗಳಿಗೆ ರಾಜಕಾರಣಿಗಳ ನಂಟೇಕೆ?

ಸ್ವಾಮೀಜಿಯಾದರೂ Cach ಆಯಲೇಬೇಕಾದ್ದರಿಂದ.

## ಬಹುಮಾನಿತ ಪ್ರಶ್ನೆ

ಎಂ.ಎಸ್. ಉಷಾ ಪ್ರಕಾಶ್, ಮೈಸೂರು

ಕೊರೊನಾ ಎಂಬ ಹೆಸರನ್ನು ರಾಜಾಸ್ತಾನದ ಮಗುವಿಗಿಟ್ಟದ್ದಾರೆ. ಮುಂದೆ ಅದರ ಭವಿಷ್ಯ?

ವಿಶ್ವವಿಖ್ಯಾತವಾಗುತ್ತದೆ. ಎಚ್ಚರಿಕೆ ವಹಿಸದ ಸಂಗಾತಿ, ಅತ್ತೆಗೆ ಅಪಾಯ ಕಟ್ಟಿಟ್ಟ ಬುತ್ತಿ.

ರಮೇಶ್, ಹನುಮನಾಳು

ಇಲ್ಲೊಬ್ಬಳು ಗೊತ್ತಿದ್ದರೂ ನನ್ನನ್ನು ಎಲ್ಲಿದ್ದೆ ಇಲ್ಲೀತನಕ ಎಂದು ಕೇಳುತ್ತಿದ್ದಾಳಲ್ಲಾ.....?

ವಕೀಲೆ ಇರ್ಬೇಕು! ಅಮೀನ ಮೂರ್ಸಲ ಕರೆದ್ಮೇಲೆ ಕಟಕಟೆಗೆ ಬಂದವನನ್ನ ನಿಮ್ಗೆಸ್ತು? ಅಂತ್ಕೇಳೋ ಅಭ್ಯಾಸ!

ರಾಜೀವ್ ಎನ್. ಮಾಗಲ್, ಸಕಲೇಶಪುರ

ಸಪ್ತಪದಿ ತುಳಿಯುವಾಗ ಸದಾ ಜೊತೆಗಿರುವೆನೆಂದು ಪತಿ ಪತ್ನಿಗೆ ಹೇಳಿದ್ದೇ ಈ ಲಾಕ್‌ಡೌನ್‌ಗೆ ಕಾರಣವಾಯ್ತೆ?

ಅಲ್ಲ. ಚೀನೀ sumsಕೃತಿಯ ಪ್ರಭಾವ. ಚೀನೀ ವಧು ಮನೆ ತುಂಬಿಸಿಕೊಳ್ಳಲೆಂದು ಹಕ್ಕಿ (ಬಾವಲಿ) ಒದ್ದಿದ್ದೇ ಕಾರಣ.

ಎಚ್.ಆರ್. ದೇಸಾಯಿ, ರಾಯಚೂರು

ದೇವರ ಸೇವೆ, ದೇಶಸೇವೆ, ಬಡವರ ಸೇವೆ; ಇವುಗಳಲ್ಲಿ ಯಾವ ಸೇವೆಯಿಂದ ನಾವು ಶ್ರೀಮಂತರಾಗುತ್ತೇವೆ?



ಸದ್ಯಕ್ಕಂತೂ ಮೂರೂ ಅಲ್ಲ. ಆತ್ಮನಿರ್ಭರತೆ ಇದ್ದರೆ ಮಾತ್ರ ಸಿರಿವಂತಿಕೆಯ ನೀರು ಬರುತ್ತೆ!

ಡಿ.ಎಲ್. ನಾಗರಾಜ್, ಬಳ್ಳಾರಿ

ಬಡತನ, ಅಸ್ಪೃಶ್ಯತೆ, ಅಸಮಾನತೆ ಎಲ್ಲಿಯವರೆಗೆ?

ಕೊರೊನಾದಂತಹ ವೈರಾಣು ಗೋಚರಿಸುವವರೆಗೆ.

ಗಣೇಶ ಎಂ. ಪೈ, ಬೆಂಗಳೂರು

ಡೈರಿಗಟ್ಲೆ ರೆಸಿಪಿಗಳ್ನ ಬರ್ಕೊಂಡ್ನನ್ನಾಕೆ ಹಳೇರುಚೀನೇ ಮಾಡ್ತಿದ್ರೆ ಅರ್ಧತ್ರಂಚಲ್ಲಿರೋ ನಾನು ಸವಿರುಚಿ ತಿನ್ನೋದ್ಯಾವಾಗ?

ಆಕೆ ಬರ್ದಿಟ್ಟಿರೋದೇ ನಿಮ್ಮ ಅನುಕೂಲಕ್ಕೆ. ರಿಟೈರಾಗ್ತಿದ್ದಾಗೇ ನಿಮ್ಗೆ ಚೀಫ್ ಷೆಫ್ ಆಗಿ ಬಡ್ತಿ ದೊರೆಯಲಿದೆ.

editorsu@sudha.co.in

ಈ ವಿಳಾಸಕ್ಕೆ ಪ್ರಶ್ನೆಗಳನ್ನು ಕಳುಹಿಸಿ.

■ ರಾಮ್